ಹೆಣ್ಣಿನ ಹಾಡೇ ಈ ಹಬ್ಬದ ಮಹತ್ವವನ್ನು ಸೂಚಿಸುವಂತಿದೆ. ಹೌದು, ಪಂಚಮಿ ಹಬ್ಬ 'ಸಹೋದರಿಗೆ ಹಿತವಾಗಲಿ, ತವರಿಗೆ ಒಳಿತಾಗಲಿ' ಎಂದು ಹೆಣ್ಣುಮಕ್ಕಳು ನಾಗನಲ್ಲಿ ಪ್ರಾರ್ಥಿಸುವ ಹಬ್ಬವಿದು. ಆ ದಿನ ನಾಗದೇವತೆಗೆ ತನಿ ಎರೆಯುವ ದಿನ. ವಿಶೇಷ ನೈವೇದ್ಯ ಸಲ್ಲಿಸಿ ಪೂಜಿಸುವ ದಿನ. ನಾಗಪಂಚಮಿಯಂದು ಭೂಮಿಯನ್ನು ಅಗೆಯಬಾರದು, ಹೊಲದಲ್ಲಿ ಕಟಾವು ಮಾಡಬಾರದು, ಏನನ್ನೂ ಕೊಯ್ಯಬಾರದು, ಕರಿಯಬಾರದು ಎನ್ನುವಂತಹ ನಂಬಿಕೆಗಳೂ ಇವೆ. ಪರಿಸರದ ಭಾಗವಾಗಿ ಹಾವುಗಳನ್ನು ನೋಡುವ ನಾಗಪೂಜೆಯ ಈ ಸಂದರ್ಭ ಪ್ರಕೃತಿಪೂಜೆಯೂ ಹೌದು.

'ನಾಗರಪಂಚಮಿ'ಯಷ್ಟೇ ಅಲ್ಲ, ಒಂದರ್ಥದಲ್ಲಿ ಇಡೀ ಶ್ರಾವಣಮಾಸವೇ ಹೆಣ್ಣುಮಕ್ಕಳ ಪಕ್ಷಪಾತಿ. 'ಲಕ್ಷ್ಮೀ ಬಾರಮ್ಮ' ಎಂದು ವರಲಕ್ಷ್ಮಿಯನ್ನು ಆರಾಧಿಸುವ 'ವರ ಮಹಾಲಕ್ಷ್ಮಿ ಹಬ್ಬ' ಹಾಗೂ ಸೌಭಾಗ್ಯವನ್ನು ಕೋರಿ ಮಂಗಳಗೌರಿಯನ್ನು ಆಚರಿಸುವುದು ಶ್ರಾವಣದಲ್ಲೇ. ಲಕ್ಷ್ಮೀಪೂಜೆಯ ಹಿಂದೆ ಧನ–ಕನಕದ ಅಪೇಕ್ಷೆಯಷ್ಟೇ ಅಲ್ಲ – ಆರೋಗ್ಯ, ಆಯುಸ್ಸು, ಕೀರ್ತಿ, ಯಶಸ್ಸು, ಧೈರ್ಯ, ಗೌರವದ ನಿರೀಕ್ಷೆಗಳೂ ಇವೆ. ಲಕ್ಷ್ಮಿ ಬಹುರೂಪಿ. ಆ ತಾಯಿ ಧಾನ್ಯಲಕ್ಷ್ಮಿಯೂ ಹೌದು. ಇನ್ನು ಮಂಗಳಗೌರಿ ಸುಮಂಗಲಿತನದ ಸಂಕೇತ, ಹೆಣ್ಣಿನ ಸೌಭಾಗ್ಯದ ರೂಪಕ.

ಪಂಚಮಿಹಬ್ಬ ಹಾಗೂ ಲಕ್ಷ್ಮಿ–ಗೌರಿಯರ ಸಂಭ್ರಮದ ಜೊತೆಗೆ ನೆನಪಿಸಿಕೊಳ್ಳಬೇಕಾದುದು 'ರಕ್ಷಾಬಂಧನ'ದ ಅನುಬಂಧವನ್ನು. ಅದು ಕೂಡ ಹೆಣ್ಣುಮಕ್ಕಳ ಸಂಭ್ರಮಕ್ಕೆ ಇಂಬು ಕೊಡುವ ಹಬ್ಬ. ಸಹೋದರರಿಗೆ ಪ್ರೇಮದ ಸಂಕೇತವಾಗಿ ರಾಕಿ (ರಕ್ಷಾಬಂಧನ) ಕಟ್ಟುವ ಹೆಣ್ಣುಮಕ್ಕಳು, ಅದರ ಬದಲಾಗಿ ಉಡುಗೊರೆ ಪಡೆಯುತ್ತಾರೆ. ಒಂದಂತೂ ನಿಜ, ಈ ಎಲ್ಲ ಹಬ್ಬಗಳ ಸಂಭ್ರಮದ ಕೇಂದ್ರದಲ್ಲಿ ಇರುವುದು ಹೆಣ್ಣಾದರೂ, ಆ ಹೆಣ್ಣಿನ ಪ್ರಾರ್ಥನೆ–ಹರಕೆಯ ಕೇಂದ್ರದಲ್ಲಿ ಗಂಡಿರುವುದನ್ನು ಮರೆಯಬಾರದು. ಈ ಪೂಜೆ–ಪ್ರಾರ್ಥನೆಗಳೆಲ್ಲ ಹೆಣ್ಣಿನ ನಿಸ್ವಾರ್ಥ ಹಾಗೂ ಉದಾತ್ತ ವ್ಯಕ್ತಿತ್ವಕ್ಕೆ ಕನ್ನಡಿಹಿಡಿಯುವಂತಿವೆ.

## ವಿವಿಧ ಆಚರಣೆಗಳು

ಆಸ್ತಿಕರ ಪಾಲಿಗೆ ಶ್ರಾವಣ ಶ್ರಾವಣ ಶನಿವಾರ ಹಾಗೂ ಸೋಮವಾರಗಳು ವಿಶೇಷ ದಿನಗಳು. ಬಯಲುಸೀಮೆಗೆ ಬಂದು ನೋಡಿ: ಆ ದಿನಗಳಂದು ಊರ ದೇವರುಗಳಿಗೆಲ್ಲ ಸಂಭ್ರಮ. ಅನ್ನದ ದಾರಿಗಳ ಹುಡುಕಿಕೊಂಡು ಯಾವ ಯಾವುದೋ ಊರುಗಳ ಸೇರಿದವರು, ಶ್ರಾವಣದಲ್ಲಿ ಊರದೇವರುಗಳನ್ನೂ ಮನೆದೇವರುಗಳನ್ನೂ ನೆನಪಿಸಿಕೊಂಡು ಬರುತ್ತಾರೆ. ಊರುಕೇರಿಗಳ ನಂಟುಗಳ ನವೀಕರಿಸಿಕೊಳ್ಳಲಿಕ್ಕೆ ಈ ಪೂಜೆ ಪುನಸ್ಕಾರಗಳು ನೆಪವಾಗಿ ಒದಗಿಬರುತ್ತವೆ.

ತಿರುಪತಿ ಗಿರಿವಾಸನನ್ನು ಆರಾಧಿಸುವ ಕೆಲವರು ಶ್ರಾವಣ ಶನಿವಾರಗಳಂದು ತಮ್ಮ ಮನೆಯ ಚಿಕ್ಕಮಕ್ಕಳಿಗೆ ದಾಸಯ್ಯನ ಪೋಷಾಕು ತೊಡಿಸುತ್ತಾರೆ. ಶುಚಿರ್ಭೂತರಾದ ಮಕ್ಕಳು ಹಣೆಗೆ ನಾಮ ಧರಿಸಿಕೊಂಡು, ಕೈಯಲ್ಲಿ ಚೆಂಬು ಹಿಡಿದು ತಮ್ಮ ಪರಿಚಯದ ಮನೆಗಳಿಗೆ ಹೋಗಿ ಬೇಡುತ್ತಾರೆ. ಹೀಗೆ ಬೇಡಿ ತಂದ ಅಕ್ಕಿಯನ್ನು ಪ್ರಸಾದರೂಪವಾಗಿ ಭಾವಿಸುವುದಿದೆ.

ಮದುವೆಗಳಿಗೂ ಶ್ರಾವಣಮಾಸಕ್ಕೂ ಸಂಬಂಧವಿದೆ. ಆಷಾಢದ ದಿನಗಳಲ್ಲಿ ಮುಹೂರ್ತಗಳು ಇಲ್ಲದಿರುವುದರಿಂದ, ಶ್ರಾವಣದಲ್ಲಿ ಮಂಗಳವಾದ್ಯಗಳು ಮೊಳಗುತ್ತವೆ. ಶ್ರಾವಣಕ್ಕೂ ಮದುವೆಗೂ ಇರುವ ನಂಟಿನ ಹಿನ್ನೆಲೆಯಲ್ಲಿಯೇ ರಾಜ್‌ಕುಮಾರ್ ಅಭಿನಯದ 'ಶ್ರಾವಣ ಬಂತು' ಚಿತ್ರದ 'ಶ್ರಾವಣ ಮಾಸ ಬಂದಾಗ ಆನಂದ ತಂದಾಗ / ವಿರಹ ಗೀತೆ ಇನ್ನಿಲ್ಲ ಪ್ರಣಯ ಗೀತೆ ಬಾಳೆಲ್ಲ' ಗೀತೆ ರೂಪುಗೊಂಡಿರುವುದು. ಚಿ. ಉದಯಶಂಕರ್ ಬರೆದಿರುವ ಈ ಹಾಡಿನ ಕೊನೆಯ ಚರಣ ಶ್ರಾವಣಮಾಸದ ಸಂಭ್ರಮವನ್ನು ಸೊಗಸಾಗಿ ಕಟ್ಟಿಕೊಡುತ್ತದೆ:

ಮುಗಿಲೆಲ್ಲ ಕಪ್ಪಾಗಿ ಮಿಂಚಿಂದ ಬೆಳಕಾಗಿ
ಗುಡುಗಿಂದ ಸದ್ದಾಗಿ ಮಳೆಬಂದು ತಂಪಾಗಿ
ಸಂತೋಷ ಹೆಚ್ಚಾಗಿ ನವಿಲೊಂದು ಹುಚ್ಚಾಗಿ
ಕುಣಿದಾಗ ಸೊಗಸಾಗಿ ನಮಗಾಗ ಚಳಿಯಾಗಿ
ವಿರಹ ಗೀತೆ ಇನ್ನಿಲ್ಲ ಪ್ರಣಯ ಗೀತೆ ಬಾಳೆಲ್ಲ
ಮತ್ತೆ ಬಂತು ಶ್ರಾವಣ

ಇದು ಐಟಿ ಯುಗ. ಅಂಗೈಗನ್ನಡಿ ಮೊಬೈಲ್‌ನಲ್ಲೇ ವಿಶ್ವದರ್ಶನ ಸಾಧ್ಯವಾಗಿರುವ ಕಾಲಘಟ್ಟ. ಆಧುನಿಕತೆಯ ಪೊರೆ ಮೈಮನಗಳನೆಲ್ಲ ಆವರಿಸಿರುವಾಗ ಶ್ರಾವಣ ಈಗಲೂ ಪ್ರಸ್ತುತವೇ? ಪ್ರಶ್ನೆ ಅಪ್ರಸ್ತುತವೇನೂ ಅಲ್ಲ. ಆದರೆ, ಇದಕ್ಕೆ ಉತ್ತರವಾಗಿ ಇನ್ನಷ್ಟು ಪ್ರಶ್ನೆಗಳನ್ನೇ ಮುಂದಿಡಬಹುದು. ಸಾಗರ ದಾಟಿದರೂ, ಮಹಾನಗರಗಳ ಗಗನಚುಂಬಿಗಳಲ್ಲಿ ನೆಲೆಸಿದರೂ ಊರಿನ ಮೋಹನ ಮುರಲಿಯ ಕರೆಗೆ ನಾವು ಕಿವುಡಾಗಿದ್ದೇವೆಯೇ? ಏನೆಲ್ಲ ಸ್ಥಾವರಗಳ ನಿರ್ಮಿಸಿದ ಮೇಲೂ ಬೆಟ್ಟಗುಡ್ಡಗಳ ಸೆಳೆತದಿಂದ ಪಾರಾಗಿದ್ದೇವೆಯೇ? ಹೊಸ ಹೊಸ ಸಂಭ್ರಮಗಳನ್ನು ಸೃಷ್ಟಿಸಿಕೊಂಡು ವಿಶ್ವಮಾನವರಾದ ಮೇಲೂ ನಮ್ಮ ಊರುಕೇರಿಯ



ಕಲಬುರ್ಗಿಯ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣದ ಮೊದಲ ಸೋಮವಾರ ಹಬ್ಬದ ಸಂಭ್ರಮ